Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**

ವಿಶೇಷ ಸಂಚಿಕೆ

भाग—IX अनुभाग 1
PART IX SECTION 1
ಭಾಗ IX ವಿಭಾಗ 1

**प्राधिकार से प्रकाशित**
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ


| | | | |
|---|---|---|---|
| सं—1<br>No. 1<br>ಸಂಖ್ಯೆ ೧ | नई दिल्ली सोमवार, नोव्हेंबर 10, 1986<br>New Delhi Monday, November 10, 1986<br>ನವದೆಹಲಿ ಸೋಮವಾರ, ನವೆಂಬರ್ ೧೦, ೧೯೮೬ | कार्तिक 19, 1908 (शक)<br>Karthika 19, 1908 (Saka)<br>ಕಾರ್ತೀಕ ೧೯, ೧೯೦೮ (ಶಕ) | खण्ड—4<br>Vol. 4<br>ಸಂಪುಟ ೪ |


## MINISTRY OF LAW AND JUSTICE
(Legislative Department)

New Delhi, September 8, 1986/Bhadrapada 17, 1908 (Sakha)

The translations in Kannada of the following namely — (1) The Public Servants (Inquiries) Act, 1850 (2) The Caste Disabilities Removal Act, 1850 (3) The Dramatic Performances Act, 1876 (4) The Epidemic Diseases Act, 1897 (5) The Police (Incitement to Disaffection) Act, 1922 (6) The Hindu Inheritance (Removal of Disabilities) Act, 1928 (7) The Hindu Gains of Learning Act, 1930 (8) The Arya Marriage Validation Act, 1937 (9) The Employees Liability Act, 1938 (10) The Weekly Holidays Act, 1942 (11) The Foreigners Act, 1946 (12) The Representation of the People (Miscellaneous Provisions) Act, 1956 (13) The Standards of Weights and Measures Act, 1976 (14) The National Library of India Act, 1976–are hereby published under the authority of the President and shall be deemed to be the authorised translations thereof in Kannada under clause (a) of Section 2 of the authorised Translations (Central Laws) Act, 1973 (50 of 1973).

ಕೆಳಕಂಡ ಅಧಿನಿಯಮಗಳು ಎಂದರೆ (೧) ಲೋಕ ನೌಕರರ (ವಿಚಾರಣಾ) ಅಧಿನಿಯಮ, ೧೮೫೦ (೨) ಜಾತಿ ಅಸಮರ್ಥತೆಗಳನ್ನು ತೆಗೆದುಹಾಕುವ ಅಧಿನಿಯಮ, ೧೮೫೦ (೩) ನಾಟಕ ಪ್ರದರ್ಶನ ಅಧಿನಿಯಮ, ೧೮೭೬ (೪) ಸಾಂಕ್ರಾಮಿಕ ರೋಗಗಳ ಅಧಿನಿಯಮ, ೧೮೯೭ (೫) ಪೊಲೀಸು (ಅಪ್ರೀತಿ ಪ್ರಚೋದನಾ) ಅಧಿನಿಯಮ, ೧೯೨೨ (೬) ಹಿಂದೂ ವಾರಸು (ಅಸಮರ್ಥತಾ ನಿವಾರಣಾ) ಅಧಿನಿಯಮ, ೧೯೨೮ (೭) ಹಿಂದೂ ವಿದ್ಯಾರ್ಜನ ಅಧಿನಿಯಮ, ೧೯೩೦ (೮) ಆರ್ಯ ವಿವಾಹ ಮಾನ್ಯೀಕರಣ ಅಧಿನಿಯಮ, ೧೯೩೭ (೯) ನಿಯೋಜಕ ಹೊಣೆಗಾರಿಕೆ ಅಧಿನಿಯಮ, ೧೯೩೮ (೧೦) ವಾರದ ರಜಾ ದಿನ ಅಧಿನಿಯಮ, ೧೯೪೨ (೧೧) ವಿದೇಶಿಯರ ಅಧಿನಿಯಮ, ೧೯೪೬ (೧೨) ಜನತಾ ಪ್ರಾತಿನಿಧ್ಯ (ಸಂಕೀರ್ಣ ಉಪಬಂಧಗಳ) ಅಧಿನಿಯಮ, ೧೯೫೬ (೧೩) ತೂಕ ಮತ್ತು ಅಳತೆ ಮಾನಕ ಅಧಿನಿಯಮ, ೧೯೭೬, (೧೪) ಭಾರತ ರಾಷ್ಟ್ರೀಯ ಗ್ರಂಥಾಲಯ ಅಧಿನಿಯಮ, ೧೯೭೬.

ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ, (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

# ಆರ್ಯ ವಿವಾಹ ಮಾನ್ಯೀಕರಣ ಅಧಿನಿಯಮ, 1937

## (1937ರ ಅಧಿನಿಯಮ ಸಂಖ್ಯೆ 19)

[14ನೇ ಏಪ್ರಿಲ್, 1937.]

ಆರ್ಯ ಸಮಾಜದವರ ನಡುವೆ ಪ್ರಚಲಿತವಿರುವ ಅಂತರ್ವಿವಾಹಗಳಿಗೆ ಮನ್ನಣೆ ನೀಡುವ ಮತ್ತು ಅವುಗಳ ಮಾನ್ಯತೆಗೆ ಸಂಬಂಧಿಸಿದ ಸಂದೇಹಗಳನ್ನು ನಿವಾರಿಸುವ ಒಂದು ಅಧಿನಿಯಮ.

ಆರ್ಯ ಸಮಾಜದವರೆಂದು ತಿಳಿಯಲಾಗಿರುವ ಹಿಂದೂಗಳ ಒಂದು ವರ್ಗದವರಲ್ಲಿ ನಡೆಯುವ ಅಂತರ್ವಿವಾಹಗಳಿಗೆ ಮನ್ನಣೆ ನೀಡುವುದು ಮತ್ತು ಅವುಗಳ ಮಾನ್ಯತೆಗೆ ಸಂಬಂಧಿಸಿದ ಸಂದೇಹಗಳನ್ನು ನಿವಾರಿಸುವುದು ವಿಹಿತವಾಗಿರುವುದರಿಂದ; ಈ ಮೂಲಕ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

**1. ಚಿಕ್ಕ ಹೆಸರು ಮತ್ತು ವ್ಯಾಪ್ತಿ.**– (1) ಈ ಅಧಿನಿಯಮವನ್ನು ಆರ್ಯ ವಿವಾಹ ಮಾನ್ಯೀಕರಣ ಅಧಿನಿಯಮ, 1937 ಎಂದು ಕರೆಯತಕ್ಕದ್ದು.

(2) ಇದು, 1956ರ ನವೆಂಬರ್ 1ರ ನಿಕಟಪೂರ್ವದಲ್ಲಿ, 'ಬಿ' ಭಾಗದ ರಾಜ್ಯಗಳಲ್ಲಿ ಸೇರ್ಪಡೆಯಾಗಿದ್ದ ರಾಜ್ಯಕ್ಷೇತ್ರಗಳ ಹೊರತಾಗಿ, ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು ಮತ್ತು ಭಾರತದ ನಾಗರಿಕರು, ಎಲ್ಲೇ ಇದ್ದರೂ ಸಹ ಅವರಿಗೆ ಅನ್ವಯಿಸತಕ್ಕದ್ದು.

**2. ಆರ್ಯ ಸಮಾಜದವರ ನಡುವೆ ನಡೆಯುವ ವಿವಾಹವು ಅಮಾನ್ಯವಾಗದಿರುವುದು.**– ಹಿಂದೂ ಕಾನೂನಿನ ಯಾವುದೇ ಉಪಬಂಧದಲ್ಲಿ, ರೂಢಿಯಲ್ಲಿ ಅಥವಾ ಪದ್ಧತಿಯಲ್ಲಿ ಇದಕ್ಕೆ ವಿರುದ್ಧವಾದುದು ಏನೇ ಇದ್ದರೂ, ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಅಥವಾ ತರುವಾಯ, ವಿವಾಹ ಕಾಲದಲ್ಲಿ ಆರ್ಯ ಸಮಾಜದವರಾದ ಇಬ್ಬರು ವ್ಯಕ್ತಿಗಳು ಮಾಡಿಕೊಂಡ ಯಾವುದೇ ವಿವಾಹವು, ಪಕ್ಷಕಾರರು ಯಾವುದೇ ಕಾಲದಲ್ಲಿ ಹಿಂದೂಗಳ ಬೇರೆ ಬೇರೆ ಜಾತಿಗಳಿಗೆ ಅಥವಾ ಬೇರೆ ಬೇರೆ ಉಪಜಾತಿಗಳಿಗೆ ಸೇರಿದ್ದರೆಂಬ ಅಥವಾ ಪಕ್ಷಕಾರರಲ್ಲಿ ಯಾರೊಬ್ಬರು ಅಥವಾ ಇಬ್ಬರೂ ವಿವಾಹಕ್ಕೆ ಮುಂಚೆ ಯಾವುದೇ ಕಾಲದಲ್ಲಿ ಹಿಂದೂ ಧರ್ಮವಲ್ಲದ ಬೇರೆ ಧರ್ಮಕ್ಕೆ ಸೇರಿದ್ದರೆಂಬ ಸಂಗತಿಯ ಕಾರಣ ಮಾತ್ರದಿಂದಲೇ ಅಮಾನ್ಯವಾಗತಕ್ಕದ್ದಲ್ಲ ಅಥವಾ ಯಾವತ್ತೂ ಅಮಾನ್ಯವಾಗಿದ್ದಿತ್ತೆಂದು ಭಾವಿಸತಕ್ಕದ್ದಲ್ಲ.

* * * * *